the approval has not been given. will the Hon'ble Minister for Education please look into the matter personally and approve the above statutes?

SRI M. VEERAPPA MOILY (MINISTER FOR EDUCATION): MADAM DEPUTY SPEAKER, The draft statutes governing absorprion of Research Assistants as Lecturers in various Departments in the Bangalore University received in March 1988 has been under consideration of the Government. After examining the draft statutes, the Bangalore University was asked to convey some basic information regarding : 1) Justification in terms of work-load, 2) Provision for following the Roster system, particularly for Scheduled castea and tribues and 3) Educational qualifications of Research Assistants proposed to be absorbed. The Bangalore University has not yet furnished the above vital information. Immediately on receipt of the information, the Government will examine the matter.

ಶ್ರೀ ಎಂ. ಚಿಕ್ಕೆಗೌಡ: (ಮಾನ್ಯ ಸದಸ್ಯರು ಗೈರು ಹಾಜರು)

5) ಕೋಣಾಜೆ ವಿದ್ಯುತ್ ಸಬ್ ಸ್ಟೇಷನ್‌ಗೆ ಸಿಬ್ಬಂದಿ ನೇಮಕ (194)

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಉಪಾಧ್ಯಕ್ಷೆಣಿಯವರೇ ಮಂಗಳೂರಿನ ಉಳ್ಳಾಲ ಕ್ಷೇತ್ರದಲ್ಲಿ ಆಗಾಗ ವಿದ್ಯುತ್ ನಿಲುಗಡೆ ಆಗುತ್ತಲೇ ಇದೆ ರಾತ್ರಿವೇಳೆಯಲ್ಲಿ ಕೂಡ ವಿದ್ಯುತ್ ನಿಲ್ಲುವುದರಿಂದ ಗ್ರಾಹಕರಿಗೆ ತುಂಬಾ ತೊಂದರೆಯಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಕೋಣಾಜೆಯಲ್ಲಿ ಕಳೆದ ಮೂರು ವರ್ಷಗಳಿಂದ ಇರುವ ಸಬ್‌ಸ್ಟೇಷನ್ನಿಗೆ ಒಬ್ಬ ಸಿಬ್ಬಂದಿಯ ನೇಮಕ ಮಾಡದೆ ಇರುವುದು ಎಂದು ಹೇಳಲಾಗುತ್ತಿದೆ. ರಾತ್ರಿ ವಿದ್ಯುತ್ ನಿಂತು ಹೋದರೆ 8 ಕಿಲೋಮಿಟರ್ ದೂರದ ತೊಕ್ಕೊಟಿನಿಂದ ಕೋಣಾಜೆಗೆ ಹೋಗಿ ಸರಿಪಡಿಸಲು ಸಾಧ್ಯವಿಲ್ಲದೆ ಪರಿಸ್ಥಿತಿ ಒದಗಿಬಂದಿದೆ.

ಆದ ಕಾರಣ ಅತಿ ಶೀಘ್ರವಾಗಿ ಕೋಣಾಜೆ ವಿದ್ಯುತ್ ಸಬ್ ಸ್ಟೇಷನ್ನಿಗೆ ಒಬ್ಬ ಸಿಬ್ಬಂದಿಯ ನೇಮಕವನ್ನು ಮಾಡಬೇಕೆಂದು ಆಗ್ರಹಿಸುತ್ತೇನೆ. ಈ ಕುರಿತು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ: (ಶಿಕ್ಷಣ ಸಂಸದೀಯ ವ್ಯವಹಾರಗಳ ಸಚಿವರು);

ಮಾನ್ಯ ಉಪಾಧ್ಯಕ್ಷಣಿಯವರೇ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಗಿನ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇವೆ. ಮಂಗಳೂರಿನ ಉಳ್ಳಾಲ ಪ್ರದೇಶವು ಈಗ ಕೋಣಾಜೆಯಲ್ಲಿ ಸ್ಥಾಪಿಸುವ ಸಿಬ್ಬಂದಿ ರಹಿತ ಒಂದು 3 ಎಂ.ಇ.ಎ. ಸಬ್‌ಸ್ಟೇಷನ್‌ನಿಂದ ವಿದ್ಯುತ್ ಸರಬರಾಜು ನಡೆಯುತ್ತಿದ್ದು ಈ ವಿತರಣಾ ಕೇಂದ್ರವು ಸಿಬ್ಬಂದಿ ರಹಿತವಾಗಿರುವುದರಿಂದ ರಾತ್ರಿ ವೇಳೆಯಲ್ಲಿ ವಿದ್ಯುತ್ ಲೈನ್ ದೋಷದಿಂದ ವಿದ್ಯುತ್‌ಗೆ ಅಡೆ ಆದಲ್ಲಿ ಅದನ್ನು ಸರಿಪಡಿಸಲು ಉಳ್ಳಾಳ ಕೊಕ್ಕೊಟಿನಿಂದ ಶಾಖಾಧಿಕಾರಿಗಳವರು ಕೋಣಾಜೆಗೆ ಬಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಈ ವೇಳೆಯಲ್ಲಿ ಕೋಣಾಜೆಯಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳಲ್ಲಿ ವಿದ್ಯುತ್ ಅಡಚಣೆ ಉಂಟಾಗುವುದು ಸಹಜ. ಮತ್ತು ಸರಿಪಡಿಸಲು ಸಮಯ ಬೇಕಾಗುವುದು. ಅದೇ ರೀತಿಯಲ್ಲಿ ಸಿಬ್ಬಂದಿ ರಹಿತ ವಿತರಣಾ ಕೇಂದ್ರಗಳನ್ನು ರಾಜ್ಯದ 55 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಮಂಡಳಿಯು ಆರ್ಥಿಕ ಮುಗ್ಗಟ್ಟಿನಿಂದ ಈ ಎಲ್ಲ ವಿತರಣಾ ಕೇಂದ್ರಗಳನ್ನು ಎಲ್ಲ ಸಮಯಗಳಲ್ಲೂ ನೋಡಿಕೊಳ್ಳಲು ಸಿಬ್ಬಂದಿ ನೇಮಕಾತಿಯನ್ನು

ಮಾಡಿರಲಿಲ್ಲ ಆದರೆ ಈ ಸಬ್‌ಸ್ಟೇಷನ್‌ನಿಂದ ಆಗುವ ವಿದ್ಯುತ್ ಅಡಚಣೆಯನ್ನು ಕನಿಷ್ಟಗೊಳಿಸುವ ದೃಷ್ಟಿಯಿಂದ ಮಂಡಲಿಯು ರಾಜ್ಯದಲ್ಲಿರುವ ಮುಖ್ಯ ಸಿಬ್ಬಂದಿ ರಹಿತ ಸಬ್‌ಸ್ಟೇಷನ್‌ಗಳಿಗೆ ಸಿಬ್ಬಂದಿ ನೇಮಕ ಮಾಡುವ ವಿಷಯವನ್ನು ತೀವ್ರವಾಗಿ ಪರಿಶೀಲಿಸುತ್ತಿದೆ. ಕೋಣಾಜೆ ಉಪ ವಿದ್ಯುತ್ ಕೇಂದ್ರಕ್ಕೂ ಸಿಬ್ಬಂದಿಯನ್ನು ನೇಮಕ ಮಾಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಉಪಾಧ್ಯಕ್ಷಣೆಯವರು: ಶಾಸನಗಳ ರಚನೆ ಶ್ರೀ ಬಿ. ಬಸವಲಿಂಗಪ್ಪನವರು ವಿಧೇಯಕವನ್ನು ಮಂಡಿಸುವುದು.

ಶಾಸನ ರಚನಾ ಕಲಾಪಗಳು

ಶ್ರೀ ಡಿ.ಬಿ.ಚಂದ್ರೇಗೌಡ (ವಿರೋದಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷಣೆಯವರೇ ಈಗ ಇಂಟ್ರಡಕ್ಷನ್‌ಗೆ ಒಂದು ಮಸೂದೆಯನ್ನು ಏನು ತಂದಿದ್ದರೆ ಅಂದರೆ ಕರ್ನಾಟಕ ಜಿಲ್ಲಾಪರಿಷತ್‌ಗಳು ತಾಲ್ಲೂಕುಕು ಪಂಚಾಯತ್ ಸಮಿತಿಗಳು ಮಂಡಲ್ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕ 1991, ಏನು ತಂದ್ದಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಸರಿಯಾಗಿ ಇವರ ತಿದ್ದುಪಡಿ ಮಸೂದೆ ನಾವು ಕಾಲದ ಸಮಯಕ್ಕೆ ಚರ್ಚೆಗೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್: ಸೋಮವಾರದ ದಿವಸ ರಾಹುಕಾಲವಿರುವುದು ಬೆಳಿಗ್ಗೆ 7.30 ರಿಂದ 9.00 ಗಂಟೆವರೆಗೆ. ಇದು ಯಮಗಂಡ ಕಾಲ.

ಮಾನ್ಯ ಅಧ್ಯಕ್ಷಣೆಯವರೇ ಜಿಲ್ಲಾಪರಿಷತ್ ಮತ್ತು ಮಂಡಲಿ ಪಂಚಾಯತಿಯ ಕಾಯಿದೆಗೆ ಸಮಗ್ರ ತಿದ್ದುಪಡಿಯನ್ನು ಈ ಸದನದಲ್ಲಿ ಈ ಹಿಂದೆ ಮಂಡನೆ ಮಾಡಿದ್ದಾರೆ. ಸ್ವಲ್ಪ ಹೆಚ್ಚುಕಡಿಮೆ ನಾವು ಇದರ ಚರ್ಚೆಯ ಅರ್ಧಭಾಗದಲ್ಲಿದ್ದೇವೆ. ನೀವು ಇಂಟ್ರಡ್ಯೂಸ್ ಮಾಡಿದಮೇಲೆ ಅಬ್ಜೆಕ್ಷನ್ ಮಾಡಲು ನಮಗೆ ಏನೂ ಇರುವುದಿಲ್ಲ ಆದ್ದರಿಂದ ಈ ಒಂದು ತಿದ್ದುಪಡಿ ವಿಧೇಯಕವನ್ನು ಎರಡು-ಮೂರು ಕಾರಣಗಳಿಂದ ನಾನು ವಿರೋಧ ಮಾಡುತ್ತೇನೆ.

ಮೊದಲನೆಯದು ಈ ಒಂದು ಒಟ್ಟಾರೆ ತಿದ್ದುಪಡಿ ಮಸೂದೆಯ ಶಾಸನದ ಅಥವಾ ಶಾಸನಸಭೆಯ ಚರ್ಚೆಯ ಹಂತದಲ್ಲಿದೆ. ಈ ಸಾರಿಯ ಅಧಿವೇಶನದಲ್ಲಿ ಅದನ್ನು ತರತಕ್ಕಂಥ ಸೂಚನೆಗಳನ್ನು ಕೂಡ ಕೊಟ್ಟಿದ್ದಾರೆ. ಅದನ್ನು ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೂತಾಗ ಚರ್ಚೆ ಮಾಡಿದ್ದೇವೆ. ಆ ಮಸೂದೆ ಇರುವಾಗ ಪ್ರಸ್ತುತ it is the property of the House under debate and under discussion. ಅದಕ್ಕೆ ಒಟ್ಟಾರೆ ಇರತಕ್ಕಂಥ ಸುಮಾರು 76 ತಿದ್ದುಪಡಿಗಳಲ್ಲಿ ಇದೊಂದನ್ನು ಹೊರತುಪಡಿಸಿ ಇಚೆಗೆ ತೆಗೆದು ಇಲ್ಲಿ ಇಂಟ್ರಡ್ಯೂಸ್ ಮಾಡತಕ್ಕಂಥ ಪ್ರಯತ್ನವನ್ನು ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ. ಆದುದರಿಂದ ಒಟ್ಟು ಮಾಸೂದೆ ಚರ್ಚೆಯಾಗಿ ನಿರ್ಣಯವಾಗುವ ತನಕ ಈ ಒಂದು 167 ನೇ ವಿಧಿಗೆ ಕೂಡಾ ಆ ಮಸೂದೆಯಲ್ಲಿ ನಮ್ಮ ಅಭಿಪ್ರಾಯವನ್ನು ಆಗಲೇ ವ್ಯಕ್ತಮಾಡಿದ್ದೇವೆ. ಅದಕ್ಕೆ ಅವರು ಆ ಕಾಲದಲ್ಲಿ ಉತ್ತರವನ್ನು ಹೇಳಲಿಲ್ಲ. ಈಗ ಉತ್ತರ ಹೇಳುವ ಸ್ಥಿತಿಯಲ್ಲಿದೆ. ಆದುದರಿಂದ ಸದನದಲ್ಲಿ ಯಾವ ವಿಚಾರ ಮಂಡನೆಯಾಗಿ ಚರ್ಚೆಯ ಹಂತದಲ್ಲಿದೆ ಮತ್ತೆ 167ನೇ ವಿಧಿಯನ್ನು ಅಷ್ಟೇ ಹೊರಗಡೆ ತೆಗೆದು ಪುನಃ ಮಂಡಿಸತಕ್ಕಂಥದ್ದು ಸರಿಯಾದ ಕ್ರಮದಲ್ಲಿ ವಿಚಾರವನ್ನು ಕೋರ್ಟುಗಳ ವ್ಯಾಪ್ತಿಗೆ ಕೂಡಾ ತೆಗೆದುಕೊಂಡು ಹೋಗಿದ್ದು ಆಗಿದೆ. ಕೋರ್ಟು ಒಂದು ನಿರ್ಣಯವನ್ನು ಕೊಟ್ಟು ಆ ನಿರ್ಣಯವನ್ನು ಬೆಂಚು ತೀರ್ಮಾನಕ್ಕಾಗಿ ಅವರು ಅದನ್ನು ಅಲ್ಲಿಗೆ ರೆಫರ್ ಮಾಡಿ ನನ್ನ ತಿಳುವಳಿಕೆಗೆ ಬಂದ ಹಾಗೆ 20ನೇ ತಾರೀಖಿನವರೆಗೆ ಅದಕ್ಕೆ ಸ್ಟೇಯನ್ನು ಕೂಡಾ ಕೊಟ್ಟಿದ್ದಾರೆ.